ಅಧ್ಯಕ್ಷರು: : ಈಗ ಮಾನ್ಯ ಸಭಾನಾಯಕರು ಉತ್ತರ ಕೊಟ್ಟಿದ್ದಾರೆ. ಆ ವಿಷಯ ಮುಗಿಯಿತು, ಈಗ ಮಾನ್ಯ ಸದಸ್ಯರಾದ ಶ್ರೀ ಎ.ಟಿ.ರಾಮಸ್ವಾಮಿ ಯವರು ಪ್ರಸ್ತಾಪ ಮಾಡಬೇಕು.

(ಉ) ವಿಷಯ :– ಕರ್ನಾಟಕ ಲೋಕ ಸೇವಾ ಆಯೋಗದವರು ಗ್ರೂಪ್ 'ಎ' ಮತ್ತು 'ಬಿ' ಹುದ್ದೆಗಳಿಗೆ ಸಂದರ್ಶನ ನಡೆಸುವಲ್ಲಿ ಅವ್ಯವಹಾರ ಆಗಿರುವುದರ ಬಗ್ಗೆ.

ಶ್ರೀ ಎ.ಟಿ.ರಾಮಸ್ವಾಮಿ (ಅರಕಲಗೂಡು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ಲೋಕಸೇವಾ ಆಯೋಗದವರು ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗೆ ಸಂದರ್ಶನವನ್ನು ನಡೆಸುತ್ತಿದ್ದಾರೆ. ನನಗಂತೂ ಸಂಪೂರ್ಣ ಶಂಕೆ ಇದೆ, ಅಲ್ಲಿ ಅರ್ಹರಿಗೆ ಮತ್ತು ಬಡವರಿಗೆ ಸಂದರ್ಶನದ ಆಯ್ಕೆಯಲ್ಲಿ ಬಹಳ ವಂಚನೆಯಾಗುತ್ತಿದೆ ಅಂತ ಹೇಳಿ. ವಿಧಾನಸಭೆಯಿಂದ ಕೂಗಳತೆಯ ದೂರದಲ್ಲಿ ಕೆ.ಪಿ.ಎಸ್.ಸಿ. ಕಛೇರಿ ಇದೆ, ಸಂದರ್ಶನ ಕೂಡ ಮಾಡುತ್ತಿದ್ದಾರೆ. ಕೆ.ಪಿ.ಎಸ್.ಸಿ. ಮೆಂಬರ್ಸ್ ಕೂಡ ಕೆ.ಪಿ.ಸಿ.ಸಿ. ಮೆಂಬರ್ಸ್‌ಗಳಂತೆ ಆಗಿ ಬಿಟ್ಟಿದ್ದಾರೆ. ಈಗ ಅಲ್ಲಿ ಗ್ರೂಪ್ 'ಎ' ಹುದ್ದೆಗೆ ಆಯ್ಕೆಯಾಗಬೇಕು ಅಂದರೆ ಎಷ್ಟು ರೇಟು? 10–12 ಲಕ್ಷ ರೂಪಾಯಿ. ನೋಡಿ ಕಡಿಮೆ ಹೇಳಿದಿರಿ ಅಂತ ಹೇಳಿ ಮಾಜಿ ಮಂತ್ರಿಗಳು ಹೇಳುತ್ತಿದ್ದಾರೆ. ಭ್ರಷ್ಟಾಚಾರ ರಾಜ್ಯಗಳ ಪಟ್ಟಿಯಲ್ಲಿ ನಾವು ನಾಲ್ಕನೇ ಸ್ಥಾನದಲ್ಲಿದ್ದೇವೆ. ಇರಲಿ, ಅದಕ್ಕೆ ಯಾರ ಕಡೆಗೂ ಬೆಟ್ಟು ಮಾಡಿ ತೋರಿಸಬೇಡಿ. ನಿಮ್ಮದೂ ಮೊದಲನೇ ಎರಡನೇ ಸ್ಥಾನದಲ್ಲಿದ್ದೀರಿ. ನೀವೆಲ್ಲಾ ರಾಜ್ಯಭಾರ ಮಾಡುತ್ತಿದ್ದೀರಿ, ಅದರ ಚರ್ಚೆ ಬೇರೆ ಅದು. ಅದು ಎಷ್ಟನೇ ಸ್ಥಾನದಲ್ಲಿದೆ ಮಧ್ಯೆ ಪ್ರದೇಶ? ಇಲ್ಲಿಗಿಂತ ಮುಂದೆ ಇದೆ. ಅದಕ್ಕೆ ಅವೆಲ್ಲಾ ಚರ್ಚೆಗೆ ನಾನು ಹೋಗುತ್ತಿಲ್ಲ. ಈಗ ನಮ್ಮಲ್ಲಿ ಇಲ್ಲಿ ಏನಾಗುತ್ತಿದೆ ಅದರ ಬಗ್ಗೆ ಚರ್ಚೆ ಮಾಡೋಣ. ಮಾನ್ಯ ರಾಯ ರೆಡ್ಡಿಯವರೇ, ಏನು ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳು ಇವೆ, ಏನು ಅಧಿಕಾರಿಗಳು ಆಯ್ಕೆಯಾಗುತ್ತಾರೆ ಇವರು ಆಡಳೀತದಲ್ಲಿ ಅತ್ಯಂತ ಪ್ರಮುಖವಾದ, ನಿರ್ಣಾಯಕವಾದ ಪಾತ್ರವನ್ನು ವಹಿಸಬೇಕಾಗುತ್ತದೆ. ಸಾಮಾಜಿಕ ಸ್ವಾಸ್ಥ್ಯ ಮತ್ತು ಮೌಲ್ಯಗಳನ್ನು ಉಳಿಸಲಿಕ್ಕೆ ಈ ನೌಕರಶಾಹಿ ವರ್ಗ ವಿಶೇಷವಾಗಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗಳು ಉತ್ತಮವಾಗಿ ಕೆಲಸ ಮಾಡಬೇಕಾಗುತ್ತದೆ. ಇವರು ಆಯ್ಕೆಯಾಗಲಿಕ್ಕೆಯೇ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಹುದ್ದೆಗೆ 10–12 ಲಕ್ಷ ರೂಪಾಯಿಗಳನ್ನು

ಕೊಟ್ಟು ಎಂಟ್ರಿಗೆ ದುಡ್ಡು ಕೊಟ್ಟು ನೌಕರಿಗೆ ಸೇರಿಕೊಂಡರೆ ಈ ರಾಜ್ಯದಲ್ಲಿ ಇನ್ನು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾದ ನಿಷ್ಪ, ಷ್ವಚ್ಛ, ಆಡಳಿತ ದೊರಕಲಿಕ್ಕೆ ಅವಕಾಶವಾಗುತ್ತದೆ ಎನ್ನತಕ್ಕಂಥಾದ್ದನ್ನು ನಾವೆಲ್ಲರೂ ಆಲೋಚನೆ ಮಾಡಬೇಕು. ಇಲ್ಲ, ಅಲ್ಲಿ ದುಡ್ಡು ನಡೆಯುತ್ತಿಲ್ಲ ಅಂತ ಸರ್ಕಾರ ಹೇಳಲಿ, ಆತ್ಮಾವಲೋಕನ ಮಾಡಿಕೊಂಡು, ಆತ್ಮಸಾಕ್ಷಿಯಾಗಿ ಮಾತನಾಡಲಿ. ಇದು ಎಲ್ಲರಿಗೂ ಕೂಡ ಗೊತ್ತಿದೆ, ಅದಕ್ಕೆ ಹೇಳುತ್ತಾರೆ ಸಂವಿಧಾನಿಕ ಸಂಸ್ಥೆ ಅದು ಅಂತ ಹೇಳಿ, ರಾಜ್ಯಾಂದ ಬದ್ಧ ಸಂಸ್ಥೆ ಅಂತ ಹೇಳಿ. ಹಾಗಾದರೆ ರಾಜ್ಯಾಂಗ ಬದ್ಧವಾದ ಸಂಸ್ಥೆ ರಾಜ್ಯಾಂಗದ ಪ್ರಕಾರ ನಡೆಯಬೇಕು. ನಿಷ್ಠೆಬಂದ, ಪ್ರಾಮಾಣಿಕವಾಗಿ ಕ್ಲೀನ್ ಆಗಿ ಆಡಳಿತವನ್ನು ಅದು ನಡೆಸಬೇಕು. ಎಲ್ಲರೂ ಸಾರಾಸಗಟಾಗಿ ಅಲ್ಲಿರತಕ್ಕಂಥವರು ಭ್ರಷ್ಟರು ಅಂತ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಒಬ್ಬರೋ ಇಬ್ಬರೋ ಪ್ರಾಮಾಣಿಕರು ಇರಬಹುದು, ಆದರೆ ಹೆಚ್ಚು ಜನ ಅಪ್ರಾಮಾಣಿಕರು ಇದ್ದಾಗ ಮಾರ್ಕ್ಸ್ ಕೊಡುವವರು ಅವರು. ಹೆಚ್ಚು ಜನ ಮಾರ್ಕ್ಸ್ ಹೆಚ್ಚು ಕೊಟ್ಟಾಗ ಅಪ್ರಾಮಾಣಿಕ ಆಯ್ಕೆಯಾಗುತ್ತಾನೆ. ಈ ರಾಜ್ಯದ ಆಡಳಿತ ಕಾರ್ಯಾಂಗ ವ್ಯವಸ್ಥೆ ನಿಜಕ್ಕೂ ದಿವಾಳಿಯಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತಾ, ಆ ದಿಕ್ಕಿನಲ್ಲಿ ಈ ಸಮಾಜದ ಆರೋಗ್ಯವನ್ನು ಕಾಪಾಡಲಿಕ್ಕೆ ಈ ಒಂದು ಆಯ್ಕೆ ಅತ್ಯಂತ ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ ನಡೆಯಲಿಕ್ಕೆ ಸರ್ಕಾರ ಕ್ರಮ ಕೈಗೊಳ್ಳಲಿಕ್ಕೆ ಮುಂದೆ ಬರುತ್ತದೆಯೇ ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಕೇಳಲಿಕ್ಕೆ ಇಚ್ಛಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ತಾವು ಅಲ್ಲಿ ಕುಳಿತಿದ್ದೀರಿ, ನೀವು ಅಲ್ಲಿ ಅಧ್ಯಕ್ಷರಾಗಿ ಕುಳಿತುಕೊಂಡು ನಾವೆಲ್ಲ ಶಾಸಕರಾಗಿ ಈ ಬಡವರಿಗೆ ಅರ್ಹರಿಗೆ ಇಂತಹ ಅನ್ಯಾಯವಾಗುವುದನ್ನು ನೋಡಿಕೊಂಡು ಕುಳಿತುಕೊಂಡರೆ ನಿಜಕ್ಕೂ ಕೂಡ ಅವರ ಶಾಪ ನಮಗೆ ತಟ್ಟುತ್ತದೆ.

ಛೇರ್ಮನ್ : ಮಾನ್ಯ ರಾಮಸ್ವಾಮಿಯವರೇ, ದಯವಿಟ್ಟು ಶಾರ್ಟ್ ಮಾಡಿ.

ಶ್ರೀ ಎ.ಟಿ.ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದು ಅತ್ಯಂತ ಗಂಭೀರವಾದ ಪ್ರಶ್ನೆ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೇ, ಬಹಳ ಗುರುತರವಾದ ಆಪಾದನೆಯನ್ನು ಮಾಡಿ ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮೀಷನ್ ಬಗ್ಗೆ ಈ

ಸರ್ಕಾರಕ್ಕೆ ಗೊತ್ತಿದ್ದೂ ನಡೆಯುತ್ತಿದೆ ಅಂತ ಹೇಳಿ ಒಬ್ಬರು ಆಳುವ ಪಕ್ಷದ ಸದಸ್ಯರು ಈ ಸಭೆಯ ಮುಮದೆ ಹೇಳುತ್ತಿದ್ದಾರೆ. ನಮ್ಮ ಸ್ಥಿತಿ ಇಲ್ಲಿ ಏನು ಅಂತ ನಮಗೆ ಅರ್ಥವಾಗುತ್ತಿಲ್ಲ. ಸರ್ಕಾರ ರೀ ಆಕ್ಟ್ ಮಾಡಿದಂತೆ ಕಾಣುತ್ತಿಲ್ಲ. ಇಷ್ಟೊಂದು ಒಂದು ರೂಲಿಂಗ್ ಪಾರ್ಟಿ ಸದಸ್ಯರು

ಶ್ರೀ ಎ.ಟಿ.ರಾಮಸ್ವಾಮಿ : ಮಾನ್ಯ ಮಾಧುಸ್ವಾಮಿಯವರೇ, ಇದು ಏನೂ ಇವತ್ತು ಈ ವ್ಯವಸ್ಥೆ ನಡೆಯುತ್ತಿಲ್ಲ. ಇದು ನಡೆದುಕೊಂಡು ಬಂದಿದೆ. ನಾನು ಅದಕ್ಕೆ ಆಗಲೇ ಹೇಳಿದೆ, ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಇದನ್ನು ಸರಿಪಡಿಸತಕ್ಕಂಥ ದಿಕ್ಕಿನಲ್ಲಿ ಪ್ರಯತ್ನವನ್ನು ನಾವು ಮಾಡಲೇ ಬೇಕು. ಈಗ ಮಾರ್ಕ್ಸ್‌ನ್ನು ಅಭ್ಯರ್ಥಿಗಳಿಗೆ ಮೊದಲೇ ಅನೌನ್ಸ್ ಮಾಡಿಬಿಡುತ್ತಾರೆ. 930,950,1000,1100 ಅಂತ ಹೇಳಿ, ಯಾವಾಗ ಅನೌನ್ಸ್ ಮಾಡುತ್ತಾರೆ, ಯಾರನ್ನು ಮೇಲಕ್ಕೆ ತೆಗೆದುಕೊಂಡು ಹೋಗಬೇಕು, ಯಾರನ್ನು ಕೆಳಗೆ ತರಬೇಕು ಎನ್ನತಕ್ಕಂಥ ಆಲೋಚನೆ ನಡೆಯುತ್ತದೆ. ಅದಕ್ಕೆ ಇದೆಲ್ಲವನ್ನೂ ಕೂಡ ಸರಿಪಡಿಸತಕ್ಕಂಥ ದಿಕ್ಕಿನಲ್ಲಿ ಸರ್ಕಾರ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು. ಇದನ್ನು ಸರಿಪಡಿಸಲಿಕ್ಕೆ ಸರ್ಕಾರ ದಯಮಾಡಿ ಮುಂದೆ ಬರಬೇಕು ಅಂತ ಹೇಳಿ ನಾನು ಅತ್ಯಂತ ಕಳಕಳಿಯಿಂದ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತಿದ್ದೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ರಾಮಸ್ವಾಮಿಯವರೇ, ನೀವು ಯಾರಿಗೆ ಹೇಳುತ್ತಿದ್ದೀರಿ, ಏನು ಹೇಳುತ್ತಿದ್ದೀರಿ ಅದಾದರೂ ಸ್ವಲ್ಪ ಸರಿಯಾಗಿ ಸ್ಪಷ್ಟವಾಗಿ ನಮಗೆ ಹೇಳಿ. ನೀವು ಹೇಳುವುದನ್ನು ಯರೂ ಕೇಳಿಸಿಕೊಳ್ಳುತ್ತಿಲ್ಲ. ನೋಡಿ, ಮಾನ್ಯ ಶ್ರೀನಿವಾಸ ಗೌಡರು ಹೇಗೆ ಕುಳಿತುಕೊಂಡಿದ್ದಾರೆ ?

ಶ್ರೀ ವಾಟಾಳ್ ನಾಗರಾಜ್ : ಈಗ ಕರ್ನಾಟಕ ಲೋಕಸೇವಾ ಆಯೋಗದ ಬಗ್ಗೆ ಮಾನ್ಯ ರಾಮಸ್ವಾಮಿಯವರು ಬಹಳ ಗುರುತರವಾದ ವಿಚಾರವನ್ನು ಈ ಸದನದ ಮುಂದೆ ಮಂಡಿಸಿದ್ದಾರೆ. ನೇರವಾಗಿ 12 ಲಕ್ಷ ರೂಪಾಯಿಗಳೂ ಇಲ್ಲದೆ ಆ ಹುದ್ದೆಗಳು ಸಿಗುವುದಿಲ್ಲವೆಂದು ಹೇಳಿದ್ದಾರೆ, ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವುದಲ್ಲ, ಈ ಬಗ್ಗೆ ಗಂಭೀರವಾಗಿ ಚರ್ಚೆ ಆಗಲೇ ಬೇಕು, ಈಗ ಲೋಕಸೇವಾ ಆಯೋಗ ಇರಬೇಕೆ ಅಥವಾ

ಬೇಡವೆ ಎನ್ನುವುದು ತೀರ್ಮಾನವಾಗಬೇಕು. ಏಕೆಂದರೆ, ರಾಮಸ್ವಾಮಿಯವರು ಈ ಸದನದಲ್ಲಿ ಇಮತಹ ಪ್ರಮುಖವಾದ ವಿಚಾರಗಳನ್ನು ಅನೇಕ ಸಾರಿ ಮಂಡಿಸಿದ್ದಾರೆ, ನಾನು ಅವರ ಬಗ್ಗೆ ಬಹಳ ಗೌರವವನ್ನು ಇಟ್ಟುಕೊಂಡಿದ್ದೇನೆ, ಚೆನ್ನಾಗಿ ಮಾತನಾಡುತ್ತಾರೆ, ಸಂಪೂರ್ಣವಾಗಿ ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಅವರು ಸದನದ ಮುಂದೆ 12 ಲಕ್ಷ ರೂಪಾಯಿಗಳನ್ನು ಒಂದು ಹುದ್ದೆಯ ಆಯ್ಕೆಗೆ ತೆಗೆದುಕೊಳ್ಳಲಾಗುತ್ತಿದೆ ಎಂದು ಹೇಳಿದರು. ಅದರಲ್ಲೇನೂ ಹಿಂದೆ ಮುಂದೆ ಅನ್ನುವುದಲ್ಲ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳು ಗಮನಿಸುತ್ತಿಲ್ಲ. ಈ ಲೋಕಸೇವಾ ಆಯೋಗದ ವ್ಯವಸ್ಥೆ, ಅಲ್ಲಿನ ಸದಸ್ಯರ ನೇಮಕಾತಿ, ಇದೆಲ್ಲಾ ಸದನದಲ್ಲಿ ಸುಮಗ್ರವಾಗಿ ಚರ್ಚೆ ಆಗಬೇಕು. ಲೋಕಸೇವಾ ಆಯೋಗ, ಅದರ ವ್ಯವಸ್ಥೆ ಆಯೋಗದಲ್ಲಿ ಆಗುವ ಸದಸ್ಯರು, ಜಾತಿ ಆಧಾರದ ಮೇಲೆ, ಕುಲದ ಆಧಾರದ ಮೇಲೆ, ಯಾರ್ಯಾರನ್ನು ಸದಸ್ಯರನ್ನಾಗಿ ಮಾಡುತ್ತಾರೆ, ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಲೋಕಸೇವಾ ಆಯೋಗ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುತ್ತಿರುವ ಒಂದು ಕೇಂದ್ರ, ಈಗ ರಾಮಸ್ವಾಮಿಯವರು ಆಪಾದನೆ ಮಾಡುತ್ತಿರುವುದರ ಬಗ್ಗೆ ಸ್ಪೆಸಿಫಿಕ್ ಆಗಿ ಆಧಾರವನ್ನು ಇಟ್ಟುಕೊಂಡರೆ ಒಳ್ಳೆಯದು. ಇಡೀ ರಾಜ್ಯದ ಯುವಕರು ತಮ್ಮ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆಂದು ನಂಬಿಕೆ ಇಟ್ಟುಕೊಂಡಿರುವ ಕೇಂದ್ರ, ಇದಾಗಿದ್ದು ಅದರ ಬಗ್ಗೆಯೇ ಇವರು ಅನುಮಾನ ಬರುವ ರೀತಿಯಲ್ಲಿ ಹೇಳಿದರೆ ಕಷ್ಟವಾಗುತ್ತದೆ. ಆ ಕೇಂದ್ರದ ಮೇಲೆ ಅವರು ನೇರವಾಗಿ ಆರೋಪ ಮಾಡುತ್ತಿದ್ದಾರೆ. ಸುಮ್ಮನೆ ಸಾಮಾನ್ಯವಾಗಿ ಆರೋಪ ಮಾಡುವುದಲ್ಲ, ನಿರ್ದಿಷ್ಟವಾಗಿ ಇಂತಹ ಕೇಸ್‌ಗೆ, ಇಂತಹವರಿಗೆ 12 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರೆ ನಾವು ಒಪ್ಪುತ್ತೇವೆ. ಅದನ್ನು ಬಿಟ್ಟು, 10 ಲಕ್ಷ, 12 ಲಕ್ಷ ರೂಪಾಯಿಗಳು ಒಂದೊಂದು ಹುದ್ದೆಗೆ ನಡೆಯುತ್ತಿದೆ ಎಂದು ಸಾಮಾನ್ಯವಾಗಿ ಆರೋಪ ಮಾಡಿದರೆ ಕೆ.ಪಿ.ಎಸ್.ಸಿ ಏಕೆ ಇರಬೇಕು ಹೇಳಿ?

ಛೇರ್ಮನ್ : ಇದು ಶೂನ್ಯವೇಳೆಯಲ್ಲಿ ಪ್ರಸ್ತಾಪ ಆಡಿರತಕ್ಕಂಥಾದ್ದು, ಚರ್ಚೆಗೆ ಅವಕಾಶವಿಲ್ಲ.

ಶ್ರೀ ಎ.ಟಿ.ರಾಮಸ್ವಾಮಿ : ಅಧ್ಯಕ್ಷರೆ, ಈ ಬಗ್ಗೆ ಚರ್ಚೆಯಾಗಲಿ, ಆಧಾರ ಕೊಡಿ ಎಂದು ಮಆನ್ಯ ಈಶ್ವರಪ್ಪನವರು ಕೇಳುತ್ತಿದ್ದಾಯಎ, ನಾನು ಆಧಾರವನ್ನು ಕೊಡುತ್ತೇನೆ, ಈ ಆತ್ಮ ಸಾಕ್ಷಿ ಆಧಾರ, ನಿಮ್ಮ ಆತ್ಮಶೋಧನೆಯನ್ನು ಮಾಡಿಕೊಳ್ಳಿ.....

(ಗೊಂದಲ)

ಶ್ರೀ ಡಿ. ಮಂಜುನಾಥ (ಉನ್ನತ ಶಿಕ್ಷಣ ಸಚಿವರು) : ಇದು ಬಹಳ ಗಂಭೀರವಾದ ವಿಷಯ, ಏನು ಮಾಡಬೇಕು ಹೇಳಿ, ಅವರು ಸಲಹೆ ಕೊಡಲಿ, ಯಾವ ರೀತಿಯಾಗಿ ಮಾಡಬೇಕು ಎಂದು ಹೇಳಲಿ.

ಶ್ರೀ ಕೆ.ಎಸ್.ಈಶ್ವರಪ್ಪ : ಹಾಗಾದರೆ ಅವರು ಹೇಳಿದ್ದನ್ನು ನೀವು ಒಪ್ಪಿಕೊಳ್ಳುತ್ತೀರಾ ?

ಶ್ರೀ ಡಿ. ಮಂಜುನಾಥ : ಒಪ್ಪಿಕೊಳ್ಳುತ್ತೇವೋ ಬಿಡುತ್ತೇವೋ ಅದು ಬೇರೆ ಪ್ರಶ್ನೆ.

ಶ್ರೀ ಕೆ.ಎಸ್.ಈಶ್ವರಪ್ಪ : ಹಾಗಾದರೆ, ಮಂತ್ರಿಗಳಲ್ಲಿ, ಸರ್ಕಾರದಲ್ಲಿ ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಅವರು ಮಾಡುತ್ತಿರುವ ಆಪಾದನೆಯನ್ನು ನೀವು ಒಪ್ಪಿಕೊಳ್ಳುತ್ತೀರಾ? ಒಪ್ಪಿಕೊಳ್ಳುವುದಾದರೆ, ಅದಕ್ಕೆ ನಾವು ಸಲಹೆಯನ್ನು ಕೊಡುತ್ತೇವೆ.

ಶ್ರೀ ಡಿ.ಮಂಜುನಾಥ : ಮಾನ್ಯ ಛೇರ್ಮನ್‌ರವರೇ ಇದು ಶೂನ್ಯವೇಳೆ ವಿಷಯ, ಶೂನ್ಯವೇಳೆ ಎಂದರೆ, ವಿಷಯವನ್ನು ಮಂಡಿಸಬೇಕು ಆಮೇಲೆ ಅದಕ್ಕೆ ಸರ್ಕಾರ ಉತ್ತರ ಕೊಡಬೇಕು. ಇದನ್ನು ಬಿಟ್ಟು ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬಾರದು.

ಶ್ರೀ ಹೆಚ್.ಡಿ. ಬಸವರಾಜು : ಈ ಬಗ್ಗೆ ನಾವು ಒಂದು ವಿಚಾರವನ್ನು ಹೇಳಲೇ ಬೇಕಾಗುತ್ತದೆ, ಪ್ರಾಮಾಣಿಕವಾದ ಅಧಿಕಾರಿಗಳೂ ಇರುತ್ತಾರೆ, ಎಲ್ಲರನ್ನೂ ಒಂದೇ ವರ್ಗಕ್ಕೆ ಸೇರಿಸಿದರೆ ಹೇಗಾಗುತ್ತದೆ ಸರ್? ಇವತ್ತು ನ್ಯಾಯ ಕೊಡುವವರು ಅವರು, ಅವರ ಬಗ್ಗೆಯೇ ನಾವೇನಾದರೂ ಸಂಶಯವನ್ನು ವ್ಯಕ್ತಪಡಿಸಿದರೆ ತುಂಬಾ ಕಷ್ಟವಾಗುತ್ತದೆ. ಅವರ ಅಭಿಪ್ರಾವನ್ನು ನಾನು ಒಪ್ಪುತ್ತೇನೆ, ಆದರೆ ಆ ಅಭಿಪ್ರಾಯಕ್ಕೆ ತಕ್ಕದಾದ ತನಿಖೆ ಮಾಡಲಿ, ಆದರೆ ಎಲ್ಲರೂ ಅದೇ ರೀತಿ ಎಂದರೆ, ನ್ಯಾಯ ದೊರಕುವಂತಹ ಸ್ಥಾನದಲ್ಲಿ ನಾವು ಆ ರೀತಿ ವರ್ಗೀಕರಣ ಮಾಡದೆ ಸಾರಸಗಟಾಗಿ ಹೇಳಿದರೆ ಹೇಗೆ ಸರ್?

(ಗೊಂದಲ)

ಶ್ರೀ ಎ.ಟಿ.ರಾಮಸ್ವಾಮಿ : ನಾನು ಅಲ್ಲಿರುವ ಎಲ್ಲಾ ಸದಸ್ಯರ ಮೇಲೆ ಆರೋಪ ಮಾಡುತ್ತಿಲ್ಲ, ಕೆಲವರು ಪ್ರಾಮಾಣಿಕರೂ ಕೂಡ ಅಲ್ಲಿದ್ದಾರೆನ್ನುವುದನ್ನು ಕೂಡ ಹೇಳಿದ್ದೇನೆ. ರಾಜ್ಯ ಎಲ್ಲಿಗೆ ಹೋಗುತ್ತಿದೆ, ನಾವು ಎಲ್ಲಿಗೆ ಹೋಗುತ್ತಿದ್ದೇವೆ, ಅದನ್ನೇ ವಹಿಸಿಕೊಂಡು ಮಾತನಾಡುವುದಕ್ಕೆ ಹೋದರೆ ಬಡವರು ಏನಾಗುತ್ತಾರೆ? ಈಗಲೇ ನಾವು ವಿನಾಶದ ಅಂಚಿಗೆ ತಲುಪಿದ್ದೇವೆ, ಇನ್ನೇನು ಆಗಬೇಕೆಂದು ನೀವು ಬಯಸುತ್ತೀರಿ ?

ಛೇರ್ಮನ್ : ಶೂನ್ಯವೇಳೆ ಮುಗಿದಿದೆ.....

(ಗೊಂದಲ)

ಶ್ರೀ ಹೆಚ್.ಡಿ.ಬಸವರಾಜು :ಒಂದು ದುರ್ದೈವ ಎಂದರೆ ಸರ್ಕಾರದಲ್ಲಿರುವವರೇ ಈ ರೀತಿಯಾಗಿ ಮಾತನಾಡಿದರೆ ಅಲ್ಲಿಗೆ ಜನ ಏನು ಅಂತ ತಿಳಿದುಕೊಳ್ಳುತ್ತಾರೆ ?

ಶ್ರೀ ಎ.ಟಿ.ರಾಮಸ್ವಾಮಿ : ನಿಮಗೆ ಮಾತನಾಡುವ ನೈತಿಕತೆ ಇಲ್ಲದೇ ಇರಬಹುದು, ನಾವು ಮಾತನಾಡುತ್ತಿದ್ದೇವೆ, ಸ್ವಾಗತ ಮಾಡಿ.

ಶ್ರೀ ಮಹದೇವ: ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರಾದ ಎ.ಟಿ.ರಾಮಸ್ವಾಮಿಯವರು ಮಾಡಿರತಕ್ಕಂಥ ಆರೋಪ ನೂರಕ್ಕೆ ನೂರು ಸತ್ಯ, ವಿರೋಧ ಪಕ್ಷದವರು ಈ ಆರೋಪವನ್ನು ಸಾಬೀತು ಮಾಡಿ ಎಂದು ಹೇಳುತ್ತಿದ್ದಾರೆ, ಇವತ್ತು ಅದಕ್ಕೆ ಸಾಕ್ಷಿ ಬೇಕೆಂದು ಹೇಳುವುದಾದರೆ ಕೆ.ಪಿ.ಎಸ್.ಸಿ.ಗೆ ಸಂದರ್ಶನಕ್ಕೆ ಹೋಗುತ್ತಿರತಕ್ಕಂಥ ಅಭ್ಯರ್ಥಿಗಳೇ ಸಾಕ್ಷಿ, ಅಭ್ಯರ್ಥಿಗಳ್ಯಾರೂ ಕೂಡ ಕೆಲಸದ ಆಸೆಯ ವಿಚಾರದಿಂದ ಹೊರಗಡೆ ಹೇಳುವುದಿಲ್ಲ, ರಾಮಸ್ವಾಮಿಯವರು ಹೇಳಿರತಕ್ಕಂಥದ್ದು ನೂರಕ್ಕೆ ನೂರು ಸತ್ಯ, ಇದನ್ನು ಸಾಬೀತು ಮಾಡಿ ಎಂದು ವಿರೋಧ ಪಕ್ಷದವರು ಹೇಳಿದರೆ, ಎಲ್ಲೂ ಕೂಡ ಯಾರೂ ಸಾಬೀತು ಮಾಡುವುದಕ್ಕೆ ಸಾರ್ಧಯವಿಲ್ಲ, ಆದರೆ ಅವರು ಆತ್ಮಸಾಕ್ಷಿ ಎಂದು ಅವರೇನು ಹೇಳಿದ್ದಾರೆಲ್ಲಾ, ಇದು ಬಹಳ ಗಂಭೀರವಾದ ವಿಚಾರ.

ಛೇರ್ಮನ್ : ನೀವು ಕುಳಿತುಕೊಳ್ಳಿ. ಮಾನ್ಯ ಸಭಾ ನಾಯಕರು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ನಾನು ಮೊದಲು ಕ್ಷಮೆ ಕೇಳುತ್ತಿದ್ದೇನೆ, ವಿರೋಧ ಪಕ್ಷದ ನಾಯಕರು, ಹಿರಿಯರೆಲ್ಲಾ ಇದ್ದಾರೆ, ಶೂನ್ಯ

ವೇಳೆ ಎಂದರೆ ಸೆಲೆಕ್ಟೆಡ್. ಏನಾದರೂ ಜರೂರಾದಂತಹ ವಿಷಯಗಳು ರಾಜ್ಯದಲ್ಲಿ ಜರುಗಿದರೆ, ಆ ಘಟನೆಗಳ ಬಗ್ಗೆ ಪ್ರಸ್ತಾಪ ಮಾಡತಕ್ಕಂಥಾದ್ದು ಪ್ರಸ್ತಾಪ ಮಾಡಿದ ಮೇಲೆ ಏಕಾಏಕಿಯಾಗಿ ಸರ್ಕಾರದಿಂದ ನೇರವಾಗಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಅದಕ್ಕೆ ಮಾನ್ಯ ರಾಮಸ್ವಾಮಿಯವರು ಸದನದ ಹಿರಿಯ ಸದಸ್ಯರಾಗಿದ್ದಾರೆ, ಅವರಿಗೆ ಈ ಸಂಸದೀಯ ವ್ಯವಹಾರಗಳ ಬಗ್ಗೆ ಚೆನ್ನಾಗಿ ಗೊತ್ತಿದೆ. ಕೆ.ಪಿ.ಎಸ್.ಸಿ ಬಗ್ಗೆ ಪತ್ರಿಕೆ ಯಲ್ಲೂ ಬರುತ್ತದೆ. ಇವತ್ತು ಕೆ.ಪಿ.ಎಸ್. ಬಗ್ಗೆ ಚರ್ಚೆಯಾಗ ಬೇಕಾದರೆ, ಶ್ರೀ ವಾಟಾಳ್ ನಾಗರಾಜ್ ರವರು ಹೇಳಿದಂತೆ, ಬಹಳ ಗುರುತರವಾದ ಒಂದು ಆಪಾದನೆ ಮಾಡುವಂತಹ ಕಾಲದಲ್ಲಿ, ಅದರ ಬಗ್ಗೆ ಯಾವ ರೀತಿಯಾಗಿ ಪ್ರಸ್ತಾಪ ಮಾಡುತ್ತಾರೆ, ಇದರ ಬಗ್ಗೆ ಸಾಕಷ್ಟು ಜನರು ಹೇಳತಕ್ಕಂಥವರು ಇದ್ದಾರೆ. ನನಗನ್ನಿಸುವಂತೆ ಅಂತಹ ವಿಚಾರಗಳಿಗೆ ಶೂನ್ಯ ವೇಳೆಯಲ್ಲಿ ತಾವು ಅವಕಾಶ ಕೊಡಲೇ ಬಾರದು. ಪಟ್ಟಿಯನ್ನು ತಯಾರು ಮಾಡತಕ್ಕಂಥ ಕಾಲದಲ್ಲಿ, ಗಂಭೀರವಾದ ವಿಷಯಗಳ ಬಗ್ಗೆ ಯಾವ ವಿಷಯದ ಬಗ್ಗೆ ನೇರವಾಗಿ ಸರ್ಕಾರ ಉತ್ತರ ಕೊಡುವುದಕ್ಕೆ ಏಕಾಏಕಿಯಾಗಿ ಆಗುವುದಿಲ್ಲ, ಅಂತಹವನ್ನು ಮತ್ತೊಂದು ಚರ್ಚೆ ರೂಪದಲ್ಲಿ ತಂದು ಉತ್ತರ ಪಡೆದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ವಿನಂತಿ ಅಷ್ಟೆ. ಮತ್ತೊಂದು ಏನಾಗಿದೆ ಎಂದರೆ, ನಮ್ಮ ಸದಸ್ಯರೆಲ್ಲರೂ ಏಕಾಏಕಿಯಾಗಿ ಹೇಳುತ್ತಾರೆ ಎನ್ನುವುದು ಮೊದಲು ಶೂನ್ಯವೇಳೆ ಅಂತ ಇರಲಿಲ್ಲ ಪಾರ್ಲಿಮೆಂಟ್‌ನಲ್ಲಿ ಅದು ಇದ್ದ ಮೇಲೆ, ನಮ್ಮ ಚಂದ್ರೇಗೌಡರು ಸಭಾಧ್ಯಕ್ಷರಿದ್ದಾಗ ಇದನ್ನು ಇಲ್ಲಿ ಪ್ರಾರಂಭ ಮಾಡಿದರು. ಸೆಲೆಕ್ಟ್ ಮಾಡಿ ಉತ್ತರ ಕೊಡುವಂತಹ ರೀತಿಯಲ್ಲಿ, ಉತ್ತರ ಕೊಡುವುದಕ್ಕೆ ಆ ದಿವಸ ಮಂತ್ರಿಗಳು ಇರದಿದ್ದರೆ, ಎರಡನೇ ದಿವಸವಾದರೂ ಶೂನ್ಯವೇಳೆಯಲ್ಲಿ ಹೇಳಬೇಕು. ಆ ರೀತಿಯಾದ ಕ್ರಮವಾದರೆ, ನೀವು ಕೇಳಿದಂತೆಯೂ ಆಗುತ್ತದೆ, ಸರ್ಕಾರ ಕೂಡ ಉತ್ತರ ಕೊಡುವುದಕ್ಕಾಗುತ್ತದೆ, ಪತ್ರಿಕೆಯಲ್ಲೂ ಕೂಡ ಬರುತ್ತದೆ, ಮತ್ತು ಸಾರ್ವಜನಿಕರಿಗೂ ಕೂಡ ಈ ಪ್ರಶ್ನೆ ನಮಗೆ ಸಂಬಂಧಪಟ್ಟಿದ್ದು ಅದಕ್ಕೆ ಕೇಳಿದ್ದಾರೆಂದು ಮಾತನಾಡಿಕೊಳ್ಳುತ್ತಾರೆ. ಅದರ ಬಗ್ಗೆ ವಿರೋಧ ಪಕ್ಷದ ನಾಯಕರು ಹಾಗೂ ಸಭಾಧ್ಯಕ್ಷರು ಕೂಡಿ ಮಾತನಾಡಿದರೆ ಸರಿ.

ಮುಖ್ಯಮಂತ್ರಿಗಳ ಹೇಳಿಕೆ